<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**MVC 833-23 RW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ M Y A, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ನನಗೆ ಸಾಕ್ಷ್ಯ ನುಡಿಯಲು ಕೊಟ್ಟ ಅಧಿಕಾರ ಪತ್ರವನ್ನು ನಿಆರ್ - 1 ಎಂದು, CC No. 197/24 ರ ತೀರ್ಪಿನ ದೃಢೀಕೃತ ಪ್ರತಿ ನಿಆರ್ - 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರ ಪರ ಪಿ ಆರ್ ಬಿ, ವಕೀಲರಿಂದಃ**

ಮುಖ್ಯ ವಿಚಾರಣೆಗೆ ವಕೀಲರು ಮಾಹಿತಿ ನೀಡಿದ್ದಾರೆ. ವಕೀಲರು ಹೇಳಿದ ಹಾಗೆ ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಿಃ 21.5.2023 ರಂದು ಕೆ ಎಸ್ ಆರ್ ಟಿ ಸಿ ಬಸ್ ಗೆ ನಾನು ಚಾಲಕನಾಗಿದ್ದೆನು. ಚಾರ್ಜಶೀಟ ನನ್ನ ಮೇಲೆ ಇದೆ ಅಂದರೆ ಸರಿಯಲ್ಲ. ಚಾರ್ಜಶೀಟ ನನ್ನ ಮೇಲೆ ಇದೆ ಅಂದರೆ ಗೊತ್ತಿಲ್ಲ. ಪೋಲಿಸರಿಗೆ ನನ್ನ ತಪ್ಪು ಇಲ್ಲವೆಂದು ಹೇಳಿದ್ದೆನು. ನನ್ನ ತಪ್ಪು ಇರದ ಕಾರಣ ನಾನು ಪೋಲಿಸರಿಗೆ ದೂರು ನೀಡಿಲ್ಲ ಅಂದರೆ ಸರಿಯಲ್ಲ. ನಾನು ಪ್ರಥಮ ವರ್ತಮಾನ ವರದಿ ದಾಖಲಾದ ನಂತರ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರದ್ದುಪಡಿಸಲು ಹೋಗಿಲ್ಲ. ನನ್ನ ತಪ್ಪು ಇದೆ ಎಂದು ನಾನು ಮಾನ್ಯ ನ್ಯಾಯಾಲಯಕ್ಕೆ ಹೋಗಿಲ್ಲ ಅಂದರೆ ಸರಿಯಲ್ಲ. ಕಲಘಟಗಿ ಕೋರ್ಟದಲ್ಲಿ ಕ್ರಿಮಿನಲ್ ಕೇಸ್ ನಡೆದಿತ್ತು. ನಾನು ವೇಗವಾಗಿ ಚಲಾಯಿಸಿದ್ದೇನೆಂದು ಚಾರ್ಜಶೀಟ ನನ್ನ ಮೇಲೆ ಇದೆ ಅಂದರೆ ಸರಿಯಲ್ಲ. ಆ ಕಾರಣದಿಂದ ಐ ಪಿ ಸಿ-279 ಹಾಗೂ 338 ನನ್ನ ಮೇಲೆ ಹಾಕಿದ್ದಾರೆ ಅಂದರೆ ಸರಿಯಲ್ಲ. ನಾನು ವೇಗವಾಗಿ ಚಲಾಯಿಸಿ ಅಪಘಾತ ಪಡಿಸಿದ್ದರಿಂದ ಅಪಘಾತ ವಾಗಿದೆ ಅಂದರೆ ಸರಿಯಲ್ಲ.

**MVC 833-23** **RW-1**

ಎದುರುದಾರ 1 ಹಾಗೂ 2 ರವರು ಪರಿಹಾರ ಕೊಡಲು ಬಾಧ್ಯಸ್ಥರು ಅಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಸೃಷ್ಟಿ ಮಾಡಿ ಹೇಳಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**O.S. 128-25 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ L P M ವಕೀಲರಿಂದಃ**

4. ನಿಪಿ.3 ರಲ್ಲಿ ಬಡ್ಡಿ ಶೇಕಡಾ 7.85 ವಾರ್ಷಿಕ ಇದೆ ಅಂದರೆ ಸರಿ. ಅದೇ ರೀತಿ ನಿಪಿ.6 ರಲ್ಲಿ ಬಡ್ಡಿ ಶೇಕಡಾ 8.45 ಎಂದು ಇದೆ ಅಂದರೆ ಸರಿ. ನಮ್ಮ ಬ್ಯಾಂಕ ವಾಣಿಜ್ಯ ವ್ಯವಹಾರ ಮಾಡುತ್ತದೆ ಅಂದರೆ ಸರಿ. ಬಡ್ಡಿ ದರ ಬದಲಾವಣೆಯಾದಾಗ ಪ್ರತಿವಾದಿಗಳಿಗೆ ನೋಟಿಸು ಕೊಟ್ಟು ಪತ್ರ ಬರೆಸಿಕೊಳ್ಳಬೇಕು ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಕಾಲಮಿತಿಯಲ್ಲಿ ದಾವೆ ಸಲ್ಲಿಸಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**O.S. 379-13** **DW-4**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ B D H, ವಕೀಲರಿಂದಃ**

*3. ಸದರಿ ಸಾಕ್ಷಿದಾರರು ಈ ಹಿಂದೆ DW.1 ಎಂದು ಸಾಕ್ಷಿ ವಿಚಾರಣೆಗೆ ಒಳಪಟ್ಟಿದ್ದು, ಸದರಿಯವರನ್ನು ಈ ಹಿಂದೆ ಪಾಟಿ ಸವಾಲಿಗೆ ಒಳಪಡಿಸಿದ್ದು. DW.1 ರವರಿಗೆ ವಾದಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಈ ಸಾಕ್ಷಿಯಲ್ಲಿ ಅನುಮೋದನೆ ಮಾಡಿಕೊಂಡು ಮುಂದುವರೆದ ಪಾಟಿ ಸವಾಲಿಗೆ ಅನುಮತಿ ಕೇಳಿದ್ದರಿಂದ ನೀಡಲಾಯಿತು.*

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ B D H, ವಕೀಲರಿಂದಃ**

4. ಈ ಹಿಂದೆ ನಾನು DW.1 ಎಂದು ಸಾಕ್ಷಿ ವಿಚಾರಣೆಗೆ ಒಳಪಟ್ಟಿದ್ದು ಅದರಲ್ಲಿ ಹೇಳಿದ ಎಲ್ಲಾ ವಿಷಯಗಳು ಸರಿ ಇವೆ. ಈಗ ಹೇಳಿರುವ ವಿಷಯಗಳನ್ನು ಆ ಕಾಲಕ್ಕೆ ಹೇಳಿದ್ದೇನೆ ಅಂದರೆ ಸರಿ. ನನ್ನ 4 ಜನ ಸಹೋದರಿಯರು ಹಕ್ಕನ್ನು ಬಿಟ್ಟುಕೊಟ್ಟ ಬಗ್ಗೆ ಆಗಲೇ ಗೊತ್ತಿತ್ತು. ನೋಂದಣಿ ಪತ್ರದ ಮೂಲಕ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದಾರೆ ಅಂದರೆ ಸರಿ. 5 ಜನ ಸಹೋದರಿಯರ ಪೈಕಿ ಮಂಗಳಾ ಎಂಬುವವರು ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿಲ್ಲ. ಆದರೆ ಹಕ್ಕು ಬಿಟ್ಟುಕೊಡುತ್ತೇನೆಂದು ಹೇಳಿದ್ದಾರೆ. ಅದನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಅಂದರೆ ಸರಿ. ಈ ಹಿಂದೆ ಆದ ಸಾಕ್ಷಿಯಲ್ಲಿ ಈ ಎಲ್ಲ ವಿಷಯಗಳನ್ನು ಹೇಳಲು ತೊಂದರೆ ಇರಲಿಲ್ಲ. ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದೇನೆ ಅಂದರೆ ಸರಿಯಲ್ಲ. ಇನ್ನೊಂದು ಆಸ್ತಿ ರಘುನಾಥ ರಾವ್ ಎಂಬುವವರು ವಾದಿಯರ ತಂದೆ ಹಾಗೂ 1 ಮತ್ತು 2 ನೇ ಪ್ರತಿವಾದಿ ತಂದೆ ಹಾಗೂ 3 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿದೆ. ಬೆಳಗಾವಿಯಲ್ಲಿ ಸ ನಂಃ 797/2, 1 ಎಕರೆ 17 ಗುಂಟೆ ರಘುನಾಥ ರಾವ್ ರವರ ಹೆಸರಿನಲ್ಲಿದೆ. ಅದು ಶೇತ್ಕಿ ಜಮೀನು ಅಂದರೆ ಸರಿ ಅದು ರಘುನಾಥ ರಾವ್ ರವರ ಕಬ್ಜೆಯಲ್ಲಿದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಾವು ಹೇಳಿದ ನಂತರ ಮೇಲೆ ಹೇಳಿದ ಆಸ್ತಿ ಸೇರಿಸಲ್ಪಟ್ಟಿದೆ. ನಾವು ಕೌಂಟರ ಕ್ಲೇಮ ಈ ದಾವೆಯಲ್ಲಿ ಹಾಕಿಲ್ಲ. ನಮಗೆ ಮೇಲೆ ಹೇಳಿದ ಆಸ್ತಿಯಲ್ಲಿ ಹಕ್ಕು ಇಲ್ಲದ ಕಾರಣ ನಾವು ಆಸ್ತಿಯಲ್ಲಿ ಕೇಳಿಲ್ಲ ಅಂದರೆ ಸರಿಯಲ್ಲ. ಸದರಿ ಜಮೀನು ಜಂಟಿ ಕುಟುಂಬದ ಆಸ್ತಿ ಅಲ್ಲ ಅಂದರೆ ಸರಿಯಲ್ಲ. ರಘುನಾಥ ರಾವ್ ರವರ ಸ್ವಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ.

**O.S. 379-13 DW-4**

ರಘುನಾಥ ರಾವ್ ರವರು 1997 ರಲ್ಲಿ ಮರಣ ಹೊಂದಿದ್ದಾರೆ ಅಂದರೆ ಸರಿ. ರಘುನಾಥ ರಾವ್ ರವರು ಮರಣ ಹೊಂದಿದ ನಂತರ ನಾವು ವಾರಸುದಾರರೆಂದು ನಮ್ಮ ಹೆಸರು ಹಚ್ಚಿಕೊಂಡಿಲ್ಲ. ಇವತ್ತಿಗೂ ರಘುನಾಥ ರಾವ್ ರವರ ಹೆಸರಿನಲ್ಲಿ ಜಮೀನು ಇದೆ ಅಂದರೆ ಸರಿ.

5. ದಾವೆ ಡಿಕ್ರಿಯಾದ ನಂತರ ಎಫ್ ಡಿ ಪಿ ಕೇಸ ಸಲ್ಲಿಸಿದ್ದು ಗೊತ್ತಿರಲಿಲ್ಲ. ಆಗ ಎಲ್ಲಾ ಆಸ್ತಿಗಳ ಸರ್ವೆ ಆಯಿತು ಅಂದರೆ ಸರಿ. ನಾವು ಸರ್ವೆ ವರದಿ ನೋಡಿಲ್ಲ. ಸರ್ವೆ ಮಾಡುವ ಕಾಲಕ್ಕೆ ನೋಟಿಸು ಬಂದಿತ್ತು ಅಂದರೆ ಸರಿಯಲ್ಲ. ಕಮೀಶನರರವರ ವರದಿಗೆ ಆಕ್ಷೇಪಣೆ ಸಲ್ಲಿಸಿಲ್ಲ. ನನ್ನ ಸಹೋದರ -ವಿನಾಯಕ, ಅವರ ಸಹೋದರಿಯರು ರಾಜಿ ಮಾಡಿಕೊಂಡಿದ್ದು ನನಗೆ ಗೊತ್ತಿಲ್ಲ. ಇದೇ ನ್ಯಾಯಾಲಯದಲ್ಲಿ ರಾಜಿಯಾದ ಬಗ್ಗೆ ನಮ್ಮ ವಕೀಲರು ಸಹಿ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ನಮ್ಮ ವಕೀಲರು ಆಮೇಲೆ ಹೇಳಿದ್ದಾರೆ. ನಂತರ ನಾವು ನಮ್ಮ ಆಕ್ಷೇಪಣೆ ಸಲ್ಲಿಸಿಲ್ಲ ಹಾಗೂ ಕ್ಲೇಮ ಮಾಡಿಲ್ಲ. ಡಿಕ್ರಿಯಾದ ನಂತರ 6 ತಿಂಗಳ ನಂತರ ಅಪೀಲ್ ಮಾಡಿದ್ದೇವೆ ಅಂದರೆ ಸರಿ. ವ್ಯಾಜ್ಯ ಮುಂದುವರೆಸಲು ಪುನಃ ಪುನಃ ಅರ್ಜಿ ಹಾಕುತ್ತಿದ್ದೇವೆ ಅಂದರೆ ಸರಿಯಲ್ಲ.

**ಮುಂದುವರೆದ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**O.S. 392-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ J V, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ಗೋಪನಕೊಪ್ಪ ಗ್ರಾಮದ ಸ ನಂಃ 9/8 ನೇದ್ದರ ಪಹಣಿ ಪತ್ರಿಕೆ ನಿಪಿ.1 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**MVC 668-24** **RW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರ ಪರ R N T, ವಕೀಲರಿಂದಃ**

2. ಅಪಘಾತ ಪಡಿಸಿದ ವಾಹನ ನನ್ನ ಹೆಸರಿನಲ್ಲಿದೆ ಅಂದರೆ ಸರಿ. ದಿಃ 10.8.2024 ರಂದು ಅಪಘಾತ ವಾಗಿದೆ ಅಂದರೆ ಸರಿ. ಅಪಘಾತ ದ ಕುರಿತು ಪ್ರಥಮ ವರ್ತಮಾನ ವರದಿ ದಾಖಲಾಗಿದೆ ಅಂದರೆ ಸರಿ. ಪೋಲಸರು ತನಿಖೆ ಮಾಡಿ ಅಂತಿಮ ವರದಿ ಸಲ್ಲಿಸಿದ್ದಾರೆ ಅಂದರೆ ಸರಿ. ಅಪಘಾತ ದ ಕಾಲಕ್ಕೆ ನಮ್ಮ ವಾಹನದ ವಿಮೆ ಚಾಲ್ತಿಯಲ್ಲಿತ್ತು ಅಂದರೆ ಸರಿ. ಹಾಗೂ ಚಾಲಕನಿಗೆ ಡಿ ಎಲ್ ಇತ್ತು ಅಂದರೆ ಸರಿ. ವಿಮೆ ಕಂಪನಿ ಪರಿಹಾರ ಕೊಡಲು ಕೇಳಿಕೊಂಡಿದ್ದೇವೆ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.